


ಚಂದ್ರಹಾಸ ಆಳ್ವ ನಿರ್ದೇಶನದಲ್ಲಿ ನಿರ್ಮಾಣವಾದ ಚಿತ್ರವು 1989ರಲ್ಲಿ ಬಿಡುಗಡೆ ಆಗಿತ್ತು.

1990ರಲ್ಲಿ ಬಿಡುಗಡೆಯಾದ 'ಪ್ರೇಮ ತರಂಗ' ಚಿತ್ರದಲ್ಲಿ ರಾಜಕುಮಾರ್ ಭಾರತಿ ಹಾಡಿದ 'ನೀ ಹೀಂಗ ನೋಡಬ್ಯಾಡ ನನ್ನ ಗೀತೆಯು ಜನಪ್ರಿಯವಾಗಿತ್ತು. 'ಸೂಪರ್‌ನೋವಾ 459' ಚಿತ್ರದಲ್ಲಿ ಬೇಂದ್ರೆಯವರ 'ಪಾತರಗಿತ್ತಿ ಪಕ್ಕ' ಗೀತೆ ಸೇರಿಸಿಕೊಳ್ಳಲಾಗಿತ್ತು. ಎಸ್. ವಿ. ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಭೂಮಿ ತಾಯಿಯ ಚೊಚ್ಚಲ ಮಗ' ಚಿತ್ರದಲ್ಲಿ ಬೇಂದ್ರೆಯವರ ಗೀತೆಯನ್ನು ಟೈಟಲ್ ಸಾಂಗ್ ಆಗಿ ಉಪಯೋಗಿಸಲಾಯಿತು. 1998ರಲ್ಲಿ ನಿರ್ಮಾಣವಾದ ಈ ಸಿನಿಮಾದಲ್ಲಿ ಬೇಂದ್ರೆಯವರ ಗೀತೆಯನ್ನು ವರನಟ ಡಾ. ರಾಜಕುಮಾರ್ ಅವರು ಹಾಡಿದ್ದರು. 1991ರಲ್ಲಿ ನಿರ್ಮಾಣವಾದ 'ಅಂತರಂಗದ ಮೃದಂಗ' ಚಿತ್ರದಲ್ಲಿಯೂ ಟೈಟಲ್ ಸಾಂಗ್ ಬೇಂದ್ರೆಯವರದೇ ಆಗಿತ್ತು. ಈ ಹಾಡು ಕೂಡ ತನ್ನ ಮಾಧುರ್ಯದಿಂದಾಗಿ ಗಮನ ಸೆಳೆದಿತ್ತು. 2001ರಲ್ಲಿ ತೆರೆಕಂಡ 'ಚಿಟ್ಟೆ' ಚಿತ್ರದಲ್ಲಿ ಸಿ. ಅಶ್ವತ್ಥ ಅವರು 'ಯಾರಿಗೂ ಹೇಳೂಣ ಬ್ಯಾಡ ಹಾಡನ್ನು ಹಾಡಿದ್ದರು. ಹಾಗೆಯೇ 2008ರಲ್ಲಿ ನಿರ್ಮಾಣವಾದ 'ಬೆಳದಿಂಗಳಾಗಿ ಬಾ' ಚಿತ್ರದಲ್ಲಿ ಬೇಂದ್ರೆಯವರ 'ಸಚ್ಚಿದಾನಂದ ಸಚ್ಚಿದಾನಂದ..' ಗೀತೆಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರು ಹಾಡಿದ್ದರು. 2019ರಲ್ಲಿ ಬಿಡುಗಡೆಯಾದ 'ಆ ಒಂದು ನೋಟು' ಚಿತ್ರದಲ್ಲಿ ಬೇಂದ್ರೆಯವರ 'ಕುರುಡು ಕಾಂಚಾಣ' ಗೀತೆ ಅಳವಡಿಸಲಾಗಿದೆ.

'ಅಂತರಂಗದ ಮೃದಂಗ' ಚಿತ್ರದ ಹಾಡು

ಬಿ.ಸುರೇಶ್ ನಿರ್ದೇಶನದ ಕಿರುತೆರೆ ಧಾರಾವಾಹಿ 'ನಾಕುತಂತಿ'ಯ ಟೈಟಲ್ ಸಾಂಗ್ ಆಗಿ ಬೇಂದ್ರೆಯವರ ಕವಿತೆ ಬಳಸಲಾಯಿತು. ಸಾವಿರಕ್ಕೂ ಹೆಚ್ಚು ಕಂತುಗಳಲ್ಲಿ ಪ್ರಸಾರವಾದ ಈ ಧಾರಾವಾಹಿಯಲ್ಲಿ ಪ್ರತಿನೂರು ಕಂತುಗಳಿಗಾಗಿ ಕರ್ನಾಟಕದ ವಿವಿಧ ಕಲಾವಿದರ ಕಲಾಕೃತಿಗಳನ್ನು ಬಳಸಿದ್ದು ವಿಶೇಷ.

ಗಿರೀಶ ಕಾರ್ನಾಡ ಅವರು 1972ರಲ್ಲಿ ಮೈಸೂರು ರಾಜ್ಯದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಾಗಿ ಸಾಕ್ಷ್ಯಚಿತ್ರ ನಿರ್ದೇಶಿದ್ದರು. ಖ್ಯಾತ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಅವರ ಸ್ಕ್ರಿಪ್ಟ್ ಬಳಸಲಾಯಿತು. ಕ್ಯಾಮೆರಾ ಹಿಂದೆ ಹೆಸರಾಂತ ಛಾಯಾಗ್ರಾಹಕ-ನಿರ್ದೇಶಕ ಗೋವಿಂದ ನಿಹಲಾನಿ ನಿಂತಿದ್ದರೆ, ಭಾಸ್ಕರ್ ಚಂದಾವರ್ಕರ್ ಅವರು ಸಂಗೀತ ನೀಡಿದ್ದರು. ಸ್ವತಃ ಬೇಂದ್ರೆಯವರೇ ತೆರೆಯ ಮೇಲೆ ಕಾಣಿಸುವಂತಾಗಿತ್ತು. ಬೇಂದ್ರೆಯವರ ಮಾತು-ಕವಿತೆ ವಾಚನದ ಸೊಬಗು ಹಾಗೂ ಬೇಂದ್ರೆಯವರ ವ್ಯಕ್ತಿತ್ವವನ್ನು ಸೆರೆ ಹಿಡಿಯುವಲ್ಲಿ ಚಿತ್ರ ಯಶಸ್ವಿಯಾಗಿದೆ.

'ಆ ಒಂದು ನೋಟು' ಹಾಡು

ಬೆಳ್ಳಿತೆರೆಗಾಗಿ ಕೆಲಸ ಮಾಡಲು ಆರಂಭಿಸಿದ ಬೇಂದ್ರೆಯವರು ಅಲ್ಲಿ ಹೆಚ್ಚು ಕಾಲ ಮುಂದುವರೆಯಲಾಗಲಿಲ್ಲ. ಆದರೆ, ಅವರ ಕವಿತೆಗಳಿಗೆ ತೆರೆಯ ಮೇಲೆ ಚಿತ್ರಿತವಾದವು. ರಸಿಕರ ಪ್ರೀತಿ-ಮೆಚ್ಚುಗೆಗೆ ಪಾತ್ರವಾದವು. ಚಿತ್ರಗೀತೆಗಳ ಪರಂಪರೆಯಲ್ಲಿ ತಮ್ಮದೇ ಛಾಪು ಮೂಡಿಸುವಲ್ಲಿಯೂ ಬೇಂದ್ರೆಯವರ ಕವಿತೆ-ಗೀತೆಗಳೂ ಯಶಸ್ವಿಯಾಗಿವೆ. ಬೆಳ್ಳಿತೆರೆ ಜೊತೆಗಿನ ಬೇಂದ್ರೆಯವರ ಈ ಒಡನಾಟ ಮುಂದಿನ ದಿನಗಳಲ್ಲಿಯೂ ಮುಂದುವರೆಯಲಿದೆ. ●